## ಕವಿತೆ

 

ಮೂಲ: **ಪಾಬ್ಲೋ ನೆರೂದ**
ಕನ್ನಡಕ್ಕೆ: **ಬಂಜಗೆರೆ ಜಯಪ್ರಕಾಶ**

ಕಲೆ: ಎಸ್.ವಿ.ಹೂಗಾರ್

# ಇನ್ನೆಷ್ಟು ಕಾಲ



ಅದೇನೇ ಇರಲಿ, ಒಬ್ಬ ಮನುಷ್ಯ ಇನ್ನೆಷ್ಟು ಕಾಲ ಬದುಕುತ್ತಾನೆ?
ಸಾವಿರಾರು ದಿನ ಅಥವಾ ಒಂದೇ ಒಂದು ದಿನ?
ಒಂದು ವಾರ ಅಥವಾ ಶತಮಾನಗಳ ಕಾಲ?
ಸಾಯಲಿಕ್ಕೆನ್ನೆಷ್ಟು ಕಾಲ ತೆಗೆದುಕೊಳ್ಳುತ್ತಾನೆ?

'ಎಂದೆಂದಿಗೂ' ಎನ್ನುವುದರ ಅರ್ಥವೇನು?

ದಿಕ್ಕು ತೋಚದೆ ತೊಳಲಿ ಈ ತಾಕಲಾಟಗಳಲ್ಲಿ
ಇದನ್ನೊಮ್ಮೆ ಬಗೆಹರಿಸಿಕೊಳ್ಳಲೆಂದು ಹೊರಟೆ

ಪಂಡಿತೋತ್ತಮ ಪುರೋಹಿತರ ಭೇಟಿಯಾದೆ
ಅವರ ಪೂಜಾಕರ್ಮಗಳು ಮುಗಿವವರೆಗೆ ಕಾದೆ
ದೇವರು ಮತ್ತು ದೆವ್ವಗಳ ಭೇಟಿಗಾಗಿ
ಅವರ ದಾರಿಯಲ್ಲವರು ಹೋಗುವುದನ್ನು ನೋಡಿದೆ

ನನ್ನ ಪ್ರಶ್ನೆಗಳಿಂದ ಅವರಿಗೆ ತಲೆಚಿಟ್ಟು ಹಿಡಿಯಿತು
ಈ ಬಗ್ಗೆ ಹೆಚ್ಚೇನೂ ಗೊತ್ತಿರಲಿಲ್ಲ ಅವರಿಗೆ
ಅವರೇನಿದ್ದರೂ ಕೇವಲ ಕಾರ್ಯನಿರ್ವಾಹಕರಷ್ಟೆ

ದ್ರಾವಕದಲ್ಲದ್ದಿದ ಸಣ್ಣ ಚಾಕುಗಳ ಎರಡೂ ಕೈಗಳಲ್ಲಿ ಹಿಡಿದು
ಬಿಡುವೇ ಇಲ್ಲದವರಾಗಿದ್ದ ವೈದ್ಯರು
ನನ್ನನ್ನು ಸಮಾಲೋಚನೆಗೆ ಕರೆದರು